ಪರವಾಗಿ ನಿಲ್ಲುತ್ತಾರೆ. ತಮಿಳುನಾಡಿನ ಮಾತನ್ನು ಕೇಂದ್ರ ಸುಲಭವಾಗಿ ತೆಗೆದುಹಾಕುವುದಿಲ್ಲ ಎಂಬುದೇ ರಾಜ್ಯದ ಮಟ್ಟಿಗೆ ಆತಂಕದ ವಿಷಯ.

## ತೀರ್ಪುಗಳೆಲ್ಲ ತಮಿಳುನಾಡಿನತ್ತ..

2017 ಇಸವಿ ಏಪ್ರಿಲ್ ತಿಂಗಳಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 70 ಅಡಿಗೆ ಕುಸಿದಿತ್ತು. ನೀರು ಆ ಮಟ್ಟಕ್ಕೆ ಕುಸಿದರೆ ಅದನ್ನು ವೈಜ್ಞಾನಿಕವಾಗಿ 'ಡೆಡ್ ಸ್ಟೋರೇಜ್' ಎನ್ನುತ್ತಾರೆ. ಏಕೆಂದರೆ ಅಲ್ಲಿ ನಿಲ್ಲಬಹುದಾದ ನೀರು ಗಸ್ಸು, ಗಸಿಯಿಂದ ಕೂಡಿದ ದ್ರವ ರೂಪದ ಕಲುಷಿತ ಶೇಷ. ಪರಿಸ್ಥಿತಿ ಹೀಗಿದ್ದರೂ ತಮಿಳುನಾಡು ಸುಪ್ರೀಂ ಕೋರ್ಟ್ ಮೊರೆ ಹೋಗಿ ಒತ್ತಡ ತಂದು ನೀರು ಹರಿಸಿಕೊಂಡಿದೆ. ಜನವರಿ ತಿಂಗಳಿಂದ ಮೇ ತಿಂಗಳ ಅಂತ್ಯದವರೆಗೆ ಯಾವುದೇ ಕಾರಣಕ್ಕೂ ನೀರನ್ನು ಬಿಡುಗಡೆ ಮಾಡುವ ಸಮಯವಲ್ಲ ಎಂದು ಜಲಸಂಪನ್ಮೂಲ ಇಲಾಖೆಗಳು ಸ್ಪಷ್ಟ ಪಡಿಸಿವೆ. ಆದರೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರ ತ್ರಿಸದಸ್ಯ ಪೀಠ ಕಡುಬೇಸಿಗೆಯಲ್ಲೂ ಆ ರಾಜ್ಯಕ್ಕೆ 2000 ಕ್ಯೂಸೆಕ್ಸ್ ನೀರನ್ನು ಹರಿಸುವಂತೆ ಆದೇಶಿಸಿತ್ತು.

ನ್ಯಾಯಾಲಯ ತೀರ್ಪು ನೀಡುವ ಮುಂಚಿತವೇ ಕೇಂದ್ರ ಸರ್ಕಾರದ ನುರಿತ ತಂತ್ರಜ್ಞರ ತಂಡ ಕಾವೇರಿ ಜಲಾನಯನದ ಜಲಾಶಯಗಳ ವಸ್ತುಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಿತ್ತು. ಕರ್ನಾಟಕದಲ್ಲಿ ಯಾವುದೇ ಜಲಾಶಯಗಳಿಂದ ತಮಿಳುನಾಡಿಗೆ ಹರಿಸುವಷ್ಟು ನೀರು ಇಲ್ಲ ಎಂದು ನ್ಯಾಯಾಲಯಕ್ಕೆ ವರದಿ ನೀಡಿತ್ತು. ತಮಿಳುನಾಡಿನ ಒತ್ತಡದ ಮುಂದೆ ತಂತ್ರಜ್ಞರ ವೈಜ್ಞಾನಿಕ ವರದಿ ಕೆಲಸ ಮಾಡಲಿಲ್ಲ. ಆ ಸಮಯದಲ್ಲಿ ಬೆಂಗಳೂರು ನಗರ ಸೇರಿದಂತೆ ಕಾವೇರಿ ನೀರನ್ನು ಅವಲಂಬಿಸಿದ ಇತರೆ ಹಳ್ಳಿ ನಗರಗಳು ಕುಡಿಯುವ ನೀರಿಗೆ ಪರಿತಪಿಸುತ್ತಿದ್ದರೆ ತಮಿಳುನಾಡು ಬೆಳೆಗೆ ನೀರಿಲ್ಲ ಎಂದು ಗಲಾಟೆ ಮಾಡುತ್ತಿತ್ತು.

## ತಮಿಳುನಾಡಿಗೆ ಪಾಲೆಷ್ಟು?

ಎರಡು ರಾಜ್ಯದ ನೀರಿನ ಹಂಚಿಕೆಯಲ್ಲಿ ತಕರಾರು ಬಂದಿದ್ದೇ ಆದರೆ ನ್ಯಾಯೋಚಿತವಾಗಿ ಜಲದ ವಿತರಣೆ ಆಗಲೇಬೇಕೆಂಬುದು ಅಂತರಾಜ್ಯ ಜಲವಿವಾದ ಸಮಿತಿಯ ನಿಯಮ. ಆದರೆ ಕಾವೇರಿ ನೀರಿನ ಹಂಚಿಕೆ ಹಾಗೆ ಆಗಲೇ ಇಲ್ಲ. ನಾಲ್ಕು ರಾಜ್ಯಗಳ ಕಾವೇರಿ ಜಲಾನಯನದ ಒಟ್ಟು ವಿಸ್ತೀರ್ಣ 81,175 ಚದುರ ಕಿ.ಮೀ. ಈ ಗಡಿಯಲ್ಲಿ ಕಾವೇರಿ ಹರಿಯುವ ಉದ್ದ 802 ಕಿಮೀ ಆಗಿದ್ದು ಕರ್ನಾಟಕದಲ್ಲಿ 381 ಕಿಮೀ, ತಮಿಳುನಾಡಿನಲ್ಲಿ 361 ಕಿಮೀ ಮತ್ತು ಎರಡು ರಾಜ್ಯದ ಗಡಿಗಳ ನಡುವೆ 60 ಕಿಮೀ ಹರಿಯುತ್ತದೆ. ಪೂರ್ಣ ಕಾವೇರಿ ಜಲಾನಯನದಲ್ಲಿ ಉತ್ಪತ್ತಿಯಾಗುವ ಮಳೆನೀರಿನ ಜಲಸಂಪತ್ತು ಅಂದಾಜು 791 ಟಿಎಮ್‌ಸಿ. ಇದರಲ್ಲಿ 50 ಟಿಎಂಸಿ ನೀರನ್ನು ಪರಿಸರದ ಸಮತೋಲನಕ್ಕೆ ಕಾದಿರಿಸಲಾಗಿದೆ. ಇತ್ತೀಚಿಗೆ ನ್ಯಾಯಲಯದ ಅಂತಿಮ ತೀರ್ಪು ಬರುವ ಮುಂಚಿತ ಕರ್ನಾಟಕಕ್ಕೆ 270 ಟಿಎಂಸಿ ತಮಿಳುನಾಡಿಗೆ 431 ಟಿಎಂಸಿ ಕೇರಳಕ್ಕೆ 30 ಟಿಎಂಸಿ ಮತ್ತು ಪಾಂಡಿಚೇರಿಗೆ 7 ಟಿಎಂಸಿ ನಿಗದಿ ಪಡಿಸಲಾಗಿತ್ತು. ನ್ಯಾಯಾಲಯದ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ಮತ್ತೆ 14.75 ಟಿಎಂಸಿ ನೀರನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ತಮಿಳುನಾಡಿಗೆ ಇಂದಿನವರೆಗೂ ವಾಡಿಕೆಯಂತೆ ಕರ್ನಾಟಕ್ಕೆ 192 ಟಿಎಂಸಿ ನೀರನ್ನು ಹರಿಸುತ್ತಿದ್ದು ಇಂದು 177. 5 ಟಿಎಂಸಿ ಹರಿಸಬೇಕಾಗಿದೆ.

ಕಾವೇರಿ ಜಲಾನಯನದಲ್ಲಿ ಬೀಳುವ ಮಳೆಯಿಂದ ಸಂಗ್ರಹವಾಗುವ ಜಲಸಂಪತ್ತಿನಲ್ಲಿ ಶೇಕಡ 53.8 ರಷ್ಟು ಅಂದರೆ 425 ಟಿಎಂಸಿ ಕರ್ನಾಟಕದಲ್ಲೇ ಉತ್ಪತ್ತಿಯಾಗುತ್ತದೆ. ತಮಿಳುನಾಡಿನಲ್ಲಿ ಶೇ 31.9 ರಷ್ಟು ಅಂದರೆ 252 ಟಿಎಂಸಿ ಉತ್ಪತ್ತಿಯಾದರೆ, ಉಳಿದ ಶೆಕಡ 16.3 ರಷ್ಟು ಅಂದರೆ 113 ಟಿಎಂಸಿ ನೀರು ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳ ಕೊಡುಗೆ. ಈ ಅಪಾರ ನೀರಿನ ಸಂಗ್ರಹದಲ್ಲಿ ಶೇಕಡ 75ರಷ್ಟು ಕರ್ನಾಟಕಕ್ಕೆ ವಿಭಜಿಸಿದ್ದರೆ ಸುಮಾರು 318.75 ಟಿಎಂಸಿ ನೀರು ಲಭಿಸಬೇಕಿತ್ತು. ಈ ಜಲ ವಿಂಗಡಣೆಯಲ್ಲಿ ಸುಮಾರು 48 ಟಿಎಂಸಿ ನೀರು ಕರ್ನಾಟಕ ರಾಜ್ಯಕ್ಕೆ ವಂಚನೆಯಾಗಿದೆ. ಇಂದು ಕರ್ನಾಟಕಕ್ಕೆ ಸೀಮಿತವಾದ 284.75 ಟಿಎಂಸಿ ಪೂರ್ಣ ಪ್ರಮಾಣದ ನೀರನ್ನು ಕರ್ನಾಟಕದಲ್ಲಿ ಹಿಡಿದು ಬಳಸಿಕೊಳ್ಳಬಹುದಾದ ಸಾಮರ್ಥ್ಯದ ಜಲಾಶಯಗಳೇ ಇಲ್ಲ.

ರಾಜ್ಯದ ಕಾವೇರಿ ಜಲಾನಯನದ ಜಲಾಶಯಗಳಲ್ಲಿ ನಿಲ್ಲಬಹುದಾದ ನೀರಿನ ಪ್ರಮಾಣದತ್ತ ಗಮನಿಸಿದರೆ ಕೆಆರ್‌ಎಸ್ 49.5 ಟಿಎಂಸಿ, ಹೇಮಾವತಿ 37 ಟಿಎಂಸಿ, ಕಬಿನಿ 19. 5 ಟಿಎಂಸಿ ಮತ್ತು ಹಾರಂಗಿ 8.5 ಟಿಎಂಸಿ ಗಳಷ್ಟು ಮಾತ್ರ. ಈ ಮುಖ್ಯವಾದ ನಾಲ್ಕು ಜಲಾಶಯಗಳಲ್ಲಿ ನಿಲ್ಲಬಹುದಾದ ಒಟ್ಟು ನೀರಿನ ಪ್ರಮಾಣ 114 ಟಿಎಂಸಿ ಎಂದು ಆ ಜಲಾಶಯಗಳನ್ನು ನಿರ್ಮಿಸುವ ಸಮಯದಲ್ಲಿ ಲೆಕ್ಕ ಹಾಕಲಾಗಿತ್ತು. ಆದರೆ ಆ ಜಲಾಶಯಗಳಲ್ಲಿ ಕೋಟ್ಯಾಂತರ ಟನ್‌ಗಳಷ್ಟು ಹೂಳು ತುಂಬಿ ಅಲ್ಲಿ ನಿಲ್ಲಬಹುದಾದ ನೀರಿನ ಪ್ರಮಾಣದತ್ತವೂ ಗಮನ ಹರಿಸಬೇಕಿದೆ. ಕಾವೇರಿ ನದಿಗೆ 15 ರಿಂದ 20 ಉಪನದಿಗಳು ಸೇರುತ್ತಿದ್ದು ಈ ಎಲ್ಲ ಉಪನದಿಗಳಿಗೆ ತಡೆವೊಡ್ಡಿ ನೀರು ನಿಲ್ಲಿಸಿದ್ದರೆ ಒಂದೊಂದು ಪಿಕಪ್‌ನಲ್ಲೂ ನಿಲ್ಲುವ ನೀರಿನ ಪ್ರಮಣ 1.5 ಟಿಎಂಸಿ ಮೀರುವುದಿಲ್ಲ. 20 ಉಪನದಿಗಳ ತಡೆಗಳಲ್ಲಿ ನೀರು ನಿಂತರೆ ಅಂದಾಜು 30 ಟಿಎಂಸಿಗಳಷ್ಟು ಆಗಬಹುದು. ಜಲಾನಯನದ ಕೆಲ ಕೆರೆಗಳಿಗೆ ಜಲಾನಯನದ ನೀರು ಹರಿದು ನಿಂತರೆ ಅಂದಾಜು 5 ಟಿಎಂಸಿ ಗಳಾಗಬಹುದು. ಕರ್ನಾಟಕದ ಕಾವೇರಿ ಕಣಿವೆಯಲ್ಲಿ ನಾವು ಸಂಗ್ರಹಿಸಿಟ್ಟುಕೊಳ್ಳಬಹುದಾದ ನೀರಿನ ಪ್ರಮಾಣ ಕೇವಲ 150 ಟಿಎಂಸಿ ಗಳಷ್ಟು ಮಾತ್ರ..

## ಇಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಿ:

★ ಕರ್ನಾಟಕ ರಾಜ್ಯದ ಬಳಕೆಗೆ ದಕ್ಕಿರುವ ಕಾವೇರಿಯ ನೀರು 284 ಟಿಎಂಸಿಗಳಾಗಿದ್ದರೂ ಅಂದಾಜು 135 ಟಿಎಂಸಿ ನೀರನ್ನು ತಡೆದು ನಿಲ್ಲಿಸುವ ಸಾಮರ್ಥ್ಯ ಇರುವ ಜಲಾಶಯಗಳಿಲ್ಲದ ಕಾರಣ ಆ ನೀರೆಲ್ಲ ನೇರವಾಗಿ ತಮಿಳುನಾಡಿಗೆ ಹರಿಯುತ್ತದೆ.

★ ಕರ್ನಾಟಕದ ಕಾವೇರಿ ಜಲಾನಯನದ ಒಟ್ಟು ವಿಸ್ತೀರ್ಣ 34,272 ಚದುರ ಕಿ.ಮೀ. ಈ ವಿಸ್ತೀರ್ಣದಲ್ಲಿ ಜಲಾಶಯ ನಿರ್ಮಾಣವಾಗಿರುವುದು ಕಾವೇರಿ ಜಲಾನಯನದ 1/3 ಭಾಗದ ಪ್ರಾಂತ್ಯದಲ್ಲಿ ಮಾತ್ರ. ಉಳಿದ 2/3 ಭಾಗದ ಜಲಾನಯನದಲ್ಲಿ ಯಾವುದೇ ಭಾರಿ ಅಥವ ಮಧ್ಯಮ ಗಾತ್ರದ ಜಲಾಶಯ ಗಳು ನಿರ್ಮಾಣವಾಗದೆ ಒಂದೆರಡು ನೀರಿನ ಬಳಕೆಗೆ ಅನುಕೂಲ ವಾಗುವಂತಹ ದೊಡ್ಡ ಕೆರೆಗಳನ್ನು ನಿರ್ಮಿಸಲಾಗಿದೆ. ಇದಿಷ್ಟು ಪ್ರದೇಶದಲ್ಲಿ ಬಿದ್ದ ಮಳೆನೀರು ಓಟ ಕೀಳುವುದು ತಮಿಳುನಾಡಿನತ್ತಲೇ. (ಅಂದಾಜು 200 ಟಿಎಂಸಿಗೂ ಅಧಿಕ)

★ ಭೌಗೋಳಿಕ ಇಳಿಜಾರಿನಿಂದ ಕರ್ನಾಟಕ ರಾಜ್ಯದಿಂದ ಅಂದಾಜು 10 ಬಿಲಿಯನ್ ಘನ ಮೀಟರ್ ಅಂತರ್ಜಲ ನೆಲದಾಳದಲ್ಲೇ ತಮಿಳುನಾಡಿನತ್ತ ನುಸುಳಿಹೋಗುತ್ತದೆ.

★ ಕರ್ನಾಟಕ ರಾಜ್ಯದ ಭೂವಲಯದ ಇಗ್ನಿಯಸ್ ಸ್ಥಿಲಾಸ್ಥಾವರದ ಪೆನಿನ್ಸುಲಾರ್ ನೀಸ್ ಸಂಕೀರ್ಣದ ಗಡುಸು ಶಿಲೆಗಳಲ್ಲಿ ಮಳೆಯ ನೀರು ನೆಲದಾಳಕ್ಕೆ ಇಂಗುವ ಅಂಶ ಬಹಳ ಕಡಿಮೆ. ಈ ಜಲಾನಯನದಲ್ಲಿ ಸಾವಿರಾರು ಅಡಿ ಕೊಳವೆಬಾವಿ ಕೊರೆದರೂ ಅಂತರ್ಜಲ ಸಿಗುವ ಪ್ರಮಾಣ ಅತ್ಯಂತ ಕಡಿಮೆ. ಆದರೆ ತಮಿಳುನಾಡಿನ ಕಾವೇರಿ ಜಲಾನಯನದ ಬಹಳಷ್ಟು ಭಾಗ ಜಲಶಿಲೆಗಳ ಸ್ಥಾವರ. ಕಾವೇರಿ ನದಿ ಹರಿಯುವ ಈ ವಲಯವೆಲ್ಲ ಸಂತೃಪ್ತ ಹಂತದಲ್ಲಿದ್ದು ಅಂತರ್ಜಲ ಕೈಗೆಟುಕುವ ಆಳದಲ್ಲೇ ದೊರೆಯುತ್ತದೆ. ರಾಜ್ಯದಲ್ಲಿ ಕಾವೇರಿ ನದಿ ಎಲ್ಲೂ 150 ಮೀಟರ್ ಅಗಲವಾಗಿ ಹರಿಯದೇ ಇಳಿಜಾರಿನಲ್ಲಿ ವೇಗವಾಗಿ ದೌಡಾಯಿಸುತ್ತದೆ. ತಮಿಳುನಾಡಿನ ಕಾವೇರಿ ಜಲಾನಯನದ ಅರ್ಧಭಾಗಕ್ಕಿಂತ ಹೆಚ್ಚು ಪ್ರದೇಶದಲ್ಲಿ ಕಾವೇರಿ ನದಿ ಮೂವತ್ತಕ್ಕಿಂತ ಹೆಚ್ಚಿನ ಕಡೆ ಕವಲೊಡೆದು ನೆಲಮಟ್ಟದಲ್ಲೇ ನೂರು ಕಿ.ಮೀ ಅಗಲದಷ್ಟು ಪ್ರದೇಶದಲ್ಲಿ ಹರಿಯುತ್ತದೆ.

ಈ ಎಲ್ಲ ಅಂಶಗಳನ್ನು ವೀಕ್ಷಿಸಿದರೆ ತಮಿಳುನಾಡಿಗೆ ಕರ್ನಾಟಕದಿಂದ ಅಧಿಕೃತವಾಗಿಯಲ್ಲದೇ ಅನಧಿಕೃತವಾಗಿ ಹರಿಯುವ ನೀರಿನ ಪ್ರಮಾಣವೇ ಅಧಿಕ. ಈ ಪರಿಸ್ಥಿತಿಯಲ್ಲಿ ಕಾವೇರಿ ನೀರಿನ ಪ್ರಾಧಿಕಾರ ಹುಟ್ಟುಹಾಕುವ ಅಗತ್ಯವಿರಲಿಲ್ಲ. ಯಾವುದೇ ರಾಜ್ಯದ ಜಲವಿವಾದ ಉದ್ಭವಿಸಿದಾಗ ಆ ರಾಜ್ಯಗಳ ಭೂವಿಜ್ಞಾನ ಭೌಗೋಳಿಕ ವಿಷಯ, ನೀರಿನ ಶೇಖರಣೆ ಇತ್ಯಾದಿ ಅಂಕಿ ಅಂಶಗಳನ್ನು ಗಮನಿಸಿದರೆ ಮಾತ್ರ ನ್ಯಾಯವಾದ ತೀರ್ಪುಗಳು ಸಿಗಲು ಸಾಧ್ಯ. ಈ ನೀರು ನಿರ್ವಹಣಾ ಪ್ರಾಧಿಕಾರದಿಂದ ತಮಿಳುನಾಡಿಗೆ ಮಾತ್ರ ಅನುಕೂಲವಾಗುವುದೇ ವಿನಃ ಕರ್ನಾಟಕಕ್ಕೆ ಇದರಿಂದ ಸಂಕಷ್ಟವೇ! ಇಂತಹ ಅತಂತ್ರ ಪರಿಸ್ಥಿತಿಯಲ್ಲಿ ಪ್ರಾಧಿಕಾರದ ತೀರ್ಪುಗಳನ್ನೆಲ್ಲ ಕರ್ನಾಟಕ ರಾಜ್ಯ ಒಪ್ಪಲೇಬೇಕೆಂದಿಲ್ಲ. ಸೂಕ್ತವಲ್ಲದ ನಿರ್ಣಯಗಳನ್ನು ವಿರೋಧಿಸಿ ಕಾನೂನು ಸಮರಕ್ಕೆ ನಿಲ್ಲಬಹುದು. ಆದರೆ ಕರ್ನಾಟಕದ ಪರ ತೀರ್ಪು ಸಿಕ್ಕೇಸಿಗುತ್ತದೆ ಎಂದು ಭಾವಿಸುವ ಹಾಗಿಲ್ಲ.

(ಲೇಖಕರು ನಿವೃತ್ತ, ಹಿರಿಯ ಭೂಜಲ ವಿಜ್ಞಾನಿ.)